# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 398 |
| ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 15.09.2022 |
| ಉತ್ತರಿಸಬೇಕಾದ ಸಚಿವರು | : | ಮುಖ್ಯಮಂತ್ರಿಯವರು |

****

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/2 ರಲ್ಲಿ 03 ಎಕರೆ 23 ಗುಂಟೆ ಜಮೀನನ್ನು ಬಿ.ಡಿ.ಎ. ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆಯೇ; (ಪೂರ್ಣ ವಿವರ ನೀಡುವುದು) | ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/2 ರಲ್ಲಿ 3 ಎಕರೆ 23 ಗುಂಟೆ ಜಮೀನನ್ನು ಬಿ.ಟಿ.ಎಂ. 4ನೇ ಹಂತದ ಬಡಾವಣೆ ರಚನೆಗಾಗಿ ಪ್ರಾರಂಭಿಕ ಹಾಗೂ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಅಂತಿಮ ಅಧಿಸೂಚನೆ ಸಂಖ್ಯೆ:ಹೆಚ್‌ಯುಡಿ/334/ ಎಂಎನ್‌ಎಕ್ಸ್/1990, ದಿನಾಂಕ:03.11.1990 ರಂದು ಹೊರಡಿಸಲಾಗಿದೆ. ಸದರಿ ಜಮೀನಿಗೆ ಐತೀರ್ಪು ಅನುಮೋದನೆಯಾಗಿದ್ದು, ಬಡಾವಣೆ ರಚನೆಗಾಗಿ ದಿನಾಂಕ:30.11.1996 ರಂದು ತಾಂತ್ರಿಕ ವಿಭಾಗಕ್ಕೆ ಹಸ್ತಾಂತರಿಸಲಾಗಿರುತ್ತದೆ. ಭೂಸ್ವಾಧೀನ ಕಾಯ್ದೆ 1894 ರ ಸೆಕ್ಷನ್ 16(2) ರಡಿ ಹೊರಡಿಸಿರುವ ಅಧಿಸೂಚನೆಯನ್ನು ದಿನಾಂಕ:08.02.2001 ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಚುರಪಡಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆ ಮುಕ್ತಾಯವಾಗಿರುತ್ತದೆ. |
| ಆ | ಸದರಿ ಭೂ ಪ್ರದೇಶದಲ್ಲಿ ಬಿ.ಡಿ.ಎ. ಬಡಾವಣೆ ನಿರ್ಮಾಣ ಮಾಡಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆಯೇ; (ಹಂಚಿಕೆ ಮಾಡಲಾಗಿರುವ ಪೂರ್ಣ ವಿವರಗಳನ್ನು ನೀಡುವುದು) | ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/2 ರಲ್ಲಿ 03 ಎಕರೆ 23 ಗುಂಟೆ ಜಮೀನಿನಲ್ಲಿ ಬಿ.ಟಿ.ಎಂ. 4ನೇ ಹಂತದ ಬಡಾವಣೆ ನಿರ್ಮಿಸಿ, ಈ ಕೆಳಕಂಡ ನಿವೇಶನಗಳನ್ನು ರಚಿಸಲಾಗಿರುತ್ತದೆ.<br><br>**<u>9.14mx12.00m ಅಳತೆಯ ನಿವೇಶನಗಳು:</u>**<br><br>1528/ಎ, 1528/ಬಿ, 1528/ಸಿ, 1528/ಡಿ, 1528/ಇ, 1528/ಎಫ್, 1528/ಜಿ, 1539, 1540, 1541, 1542, 1543, 1544, 1545, 1546, 1547, 1550, 1551, 1552, 1553, 1554, 1555, 1556, 1557, 1558, 1559, 1560, 1561, 1562, 1563, 1564, 1565, 1566, 1567, 1568, 1569, 1570, 1571, 1572, 1577, 1578, 1579, 1580, 1581, 1582, 1583, 1584, 1585, 1586, 1587, 1588, 1071/ಎ, 1071/ಬಿ, 1079/ಎ, [ಒಟ್ಟು 54 ನಿವೇಶನಗಳು]<br><br>**<u>6.09mx9.14m ಅಳತೆಯ ನಿವೇಶನಗಳು:</u>**<br><br>1142/ಸಿ, 1163/ಸಿ [2 ನಿವೇಶನಗಳು]<br><br>ಹಂಚಿಕೆ ವಹಿಯಂತೆ ಹಂಚಿಕೆ ಮಾಡಲಾಗಿರುವ ವಿವರ ಕೆಳಕಂಡಂತಿರುತ್ತದೆ:– |

| ಕ್ರ.ಸಂ. | ನಿವೇಶನ ಸಂಖ್ಯೆ | ಹಂಚಿಕೆ ವಹಿಯಂತೆ | ನೋಂದಣಿ ದಿನಾಂಕ |
|---|---|---|---|
| 1 | 1071/ಎ | ಎಲ್.ದಾಸಪ್ಪ | 09/09/2014 |
| 2 | 1528/ಡಿ | ಅರುಣ್ ಜಯರಾಮನ್ | 21/05/2009 |

| ಕ್ರ.ಸಂ. | ನಿವೇಶನ ಸಂಖ್ಯೆ | ಹಂಚಿಕೆ ವಹಿಯಂತೆ | ನೋಂದಣಿ ದಿನಾಂಕ |
|---|---|---|---|
| 1 | 1071/ಬಿ | ಹಂಚಿಕೆ ಮಾಡಿ ರದ್ದುಪಡಿಸಲಾಗಿದೆ. | |
| 2 | 1571 | ಹಂಚಿಕೆ ಮಾಡಿ ರದ್ದುಪಡಿಸಲಾಗಿದೆ. | |

<table>
<tr><td>ಇ</td><td>ಬಡಾವಣೆ ರಚನೆ ಮಾಡಿ ನಿವೇಶನ ಹಂಚಿಕೆ ಮಾಡಿದ ಸುಮಾರು 40 ವರ್ಷಗಳ ನಂತರ ಬಿ.ಡಿ.ಎ. ಅಧಿಕಾರಿಗಳು ಖಾಸಗಿ ವ್ಯಕ್ತಿಗಳ ಜೊತೆ ಶಾಮೀಲಾಗಿ ಸದರಿ ಸ್ವತ್ತನ್ನು ನಿಯಮ ಬಾಹಿರವಾಗಿ ಖಾಸಗಿ ವ್ಯಕ್ತಿಗಳಿಗೆ ಬಿಟ್ಟುಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td rowspan="3">ಶ್ರೀಮತಿ ಶಾಂತಮ್ಮ ಮತ್ತು ಇತರರು ಭೂಸ್ವಾಧೀನದ ಕ್ರಮವನ್ನು ಪ್ರಶ್ನಿಸಿ, ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ:41386-395/2017 ರಂತೆ ಪ್ರಕರಣ ದಾಖಲಿಸಿ, ಸದರಿ ಪ್ರಕರಣವು ದಿನಾಂಕ:24.10.2019 ರಂದು ಅಂತಿಮ ಆದೇಶವಾಗಿರುತ್ತದೆ.<br>ಅರ್ಜಿದಾರರು ದಿನಾಂಕ:14.01.2020 ರಂದು ಹಿಂಬರಹ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿಯವರ ಮನವಿಯನ್ನು ಪರಿಶೀಲಿಸಿ ಕಾನೂನು ವಿಭಾಗದ ಅಭಿಪ್ರಾಯದಂತೆ ಸದರಿ ಸರ್ವೆ ನಂಬರಿನ ವಾಸ್ತವಾಂಶ ಮಾಹಿತಿಯನ್ನು ಅರ್ಜಿದಾರರಿಗೆ ನಿಯಮಾನುಸಾರ ಹಿಂಬರಹ ನೀಡಲಾಗಿದ್ದು, ಸದರಿ ಹಿಂಬರಹವು ನಿರಾಕ್ಷೇಪಣಾ ಪತ್ರವಾಗಿರುವುದಿಲ್ಲ. ಆದಾಗ್ಯೂ, ಸದರಿ ಹಿಂಬರಹವು ದುರುಪಯೋಗವಾಗುತ್ತಿರುವುದು ಚರ್ಚೆಯಲ್ಲಿರುವುದರಿಂದ ಸದರಿ ನ್ಯಾಯಾಲಯದ ಆದೇಶವನ್ನು ಮತ್ತೊಮ್ಮೆ ಕಾನೂನಾತ್ಮಕವಾಗಿ ಪರಿಶೀಲಿಸಿ, ರಿಟ್ ಪಿಟಿಷನ್ ಸಂಖ್ಯೆ:41386-395/2017 ರ ಆದೇಶದ ವಿರುದ್ಧ ಮಾನ್ಯ ವಿಭಾಗೀಯ ಪೀಠಕ್ಕೆ ಮೇಲ್ಮನವಿ ಸಂಖ್ಯೆ:398/20-21 ಅನ್ನು ದಾಖಲಿಸಲಾಗಿದೆ.</td></tr>
<tr><td>ಈ</td><td>ಸದರಿ ಸರ್ಕಾರಿ ಸ್ವತ್ತನ್ನು ಖಾಸಗಿ ವ್ಯಕ್ತಿ, ಬೇರೆಯವರಿಗೆ ಮರು ಮಾರಾಟ ಮಾಡಿರುವುದು ಹಾಗೂ ಒಡಂಬಡಿಕೆ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?</td></tr>
<tr><td>ಉ</td><td>ಸರ್ಕಾರಿ ಆಸ್ತಿಯನ್ನು ಖಾಸಗಿಯವರಿಗೆ ಬಿಟ್ಟುಕೊಟ್ಟು ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟು ಮಾಡಿರುವ ತಪ್ಪಿತಸ್ಥ ಬಿ.ಡಿ.ಎ. ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು?</td></tr>
</table>

**ಸಂಖ್ಯೆ: ನಅಇ 318 ಬೆಂಭೂಸ್ವಾ 2022**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ